**ಓ.ಎಸ್ ನಂ. 135/2016** **ಪಿ.ಡಬ್ಲ್ಯೂ-6**

**ಸಾಕ್ಷಿಯನ್ನು ದಿನಾಂಕ 6.4.2022 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**
**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಿಂದಃ**

ನಾನು ಹಾಜರುಪಡಿಸಿದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ದಾವಾ ಸ್ವತ್ತಿನ ಸಾಗುವಳಿ ಚೀಟಿ, ದಾಖಾಸ್ತು ಅರ್ಜಿಗಳು, ಅಹವಾಲು ತಃಖೆ ಗಳ ದೃಢೀಕೃತ ನಕಲುಗಳನ್ನು ನಿಪಿ 1 ರಿಂದ 6 ಎಂದು, ಕೋಡಿಯ ಪಟ್ಟಿಯ ದೃಢೀಕೃತ ನಕಲನ್ನು ನಿಪಿ 7 ಎಂದು, ಕ್ರಯಪತ್ರವನ್ನು ನಿಪಿ 8 ಎಂದು, 30.01.2006, 01.03.2007, 06.08.2015, 23.03.2015 ರ ಕ್ರಯತ್ರದ ನಕಲುಗಳನ್ನು ನಿಪಿ 9 ರಿಂದ 12 ಎಂದು, ಹಕ್ಕು ಬದಲಾವಣೆ ಮುಟೇಷನ್ ಪ್ರತಿಯನ್ನು 13 ಎಂದು ದಾವಾ ಸ್ವತ್ತಿನ ಪಹಣಿಗಳನ್ನು ನಿಪಿ 14 ರಿಂದ 29 ಎಂದು, 5 ಮುಟೇಷನ್‌ಗಳ ಪ್ರತಿಯನ್ನು 30 ರಿಂದ 34 ಎಂದು, 7 ನಕಾಶೆಗಳ ಪ್ರತಿಯನ್ನು 35 ಮತ್ತು 36 ಎಂದು ಮತ್ತು ನಾಗರಾಜ್ರವರ ಮರಣ ಪ್ರಮಾಣ ಪತ್ರವನ್ನು ನಿಪಿ 37 ಎಂದು ಗುರುತಿಸಲಾಯಿತು. ರುಣಭಾರ ಪ್ರಮಾಣ ಪತ್ರವನ್ನು ನಿಪಿ 38 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು

ಮರುವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.